ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 12/6/2020

# 6ನೇ ತರಗತಿಯಿಂದ ಇ-ಕ್ಲಾಸ್‌ಗಿಲ್ಲ ತಡೆ

## ಸಂಪುಟ ನಿರ್ಧಾರದ ಗೊಂದಲಕ್ಕೆ ತೆರೆ

12-06-೨೦೨೦

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಎಲ್‌ಕೆಜಿಯಿಂದ 5ನೇ ತರಗತಿಯವರೆಗೆ ರಾಜ್ಯದಲ್ಲಿ ಆನ್‌ಲೈನ್ ಶಿಕ್ಷಣ ರದ್ದುಗೊಂಡ ಬೆನ್ನಲ್ಲೇ ಈ ನಿರ್ಬಂಧವನ್ನು 7ನೇ ತರಗತಿವರೆಗೂ ವಿಸ್ತರಿಸಬೇಕೆಂಬ ವಿಚಾರ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಿ: ಸಚಿವದ್ವಯರ ತದ್ದಿರುದ್ಧ ಹೇಳಿಕೆಗಳಿಂದಾಗಿ ತೀವ್ರ ಗೊಂದಲ ಉಂಟಾಗಿತ್ತು. ಬಳಿಕ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರೇ ಈ ವಿಚಾರ ಚರ್ಚೆಯ ಹಂತದಲ್ಲಿದೆಯೇ ಹೊರತು ನಿರ್ಧಾರವಾಗಿಲ್ಲ ಎಂದು ಸ್ಪಷ್ಟನೆ ನೀಡುವ ಮೂಲಕ ವದಂತಿಗಳಿಗೆ ತೆರೆ ಎಳೆದರು.

ರಾಜ್ಯದ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಆನ್‌ಲೈನ್ ತರಗತಿ ನಡೆಸುತ್ತಿರುವ ಬಗ್ಗೆ ಪಾಲಕರು, ಶಿಕ್ಷಣ ತಜ್ಞರಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸಚಿವ ಸುರೇಶ್ ಕುಮಾರ್ ಬುಧವಾರ ಸಭೆ ನಡೆಸಿ ಎಲ್‌ಕೆಜಿಯಿಂದ 5ನೇ ತರಗತಿಯವರೆಗೆ ಆನ್‌ಲೈನ್ ಕ್ಲಾಸ್ ನಡೆಸುವುದನ್ನು ರದ್ದು ಮಾಡಿದ್ದರು. ಇದೇ ವಿಚಾರ ಗುರುವಾರ ನಡೆದ ಸಂಪುಟ ಸಭೆಯಲ್ಲೂ ಚರ್ಚೆಯಾಯಿತು. ಆನ್‌ಲೈನ್ ತರಗತಿಗಳಿಂದಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ತೊಂದರೆಯಾಗುತ್ತಿದೆ. ಅವರಿಗೆ ಇದರ ಲಾಭ ದೊರೆಯುವುದಿಲ್ಲ. ಈ ಹಿನ್ನೆಲೆಯಲ್ಲಿ 5ನೇ ತರಗತಿ ಬದಲಾಗಿ 7ನೇ ತರಗತಿಯವರೆಗೂ ರದ್ದು ಮಾಡಿದರೆ ಉತ್ತಮ ಎಂದು ಹಲವು ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದ್ದರೆಂದು ತಿಳಿದು ಬಂದಿದೆ. ಸಂಪುಟ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ಸಂಪುಟದಲ್ಲಿ ಈ ವಿಚಾರ ಚರ್ಚೆಯಾಯಿತೆಂದರು.

ಪುಟ 2A

ಸಾಂದರ್ಭಿಕ ಚಿತ್ರ





ಆನ್‌ಲೈನ್ ತರಗತಿ ಬಗ್ಗೆ ಗೊಂದಲ ಬೇಡ. ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳಿಗಷ್ಟೇ ಆನ್‌ಲೈನ್ ತರಗತಿ ರದ್ದು ಮಾಡಲಾಗಿದೆ.

| ಎಸ್.ಸುರೇಶ್ ಕುಮಾರ್ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ



ಆನ್‌ಲೈನ್ ಕ್ಲಾಸ್ ಬಗ್ಗೆ ಶಿಕ್ಷಣ ಸಚಿವರು ಏನು ಹೇಳುತ್ತಾರೋ ಅದೇ ಅಂತಿಮ. ನನ್ನಿಂದ ಗೊಂದಲ ಆಗಿರಬಹುದು.

| ಜೆ.ಸಿ.ಮಾಧುಸ್ವಾಮಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

## ರದ್ದಾದರೂ ನಿಂತಿಲ್ಲ ಆನ್‌ಲೈನ್ ಕ್ಲಾಸ್

» ಸರ್ಕಾರದ ನಿರ್ದೇಶನ ಪಾಲಿಸದ ಶಾಲೆಗಳು

ಬೆಂಗಳೂರು: ರಾಜ್ಯ ಸರ್ಕಾರ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣವನ್ನು ರದ್ದು ಮಾಡಿದ್ದರೂ ಬಹುತೇಕ ಶಾಲೆಗಳು ತರಗತಿ ಮುಂದುವರಿಸುತ್ತಿರುವುದು ಕಂಡು ಬಂದಿದೆ.

ಎಲ್‌ಕೆಜಿಯಿಂದ 5ನೇ ತರಗತಿವರೆಗೆ ಆನ್‌ಲೈನ್ ಶಿಕ್ಷಣ ರದ್ದುಗೊಳಿಸಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಬುಧವಾರ ಘೋಷಣೆ ಹೊರಡಿಸಿದ್ದರೂ ಈ ನಿರ್ಬಂಧ ಇನ್ನೂ ಆದೇಶದ ರೂಪದಲ್ಲಿ ತಲುಪಿಲ್ಲವೆಂದು ಬಹುತೇಕ ಖಾಸಗಿ ಶಾಲೆಗಳು ಆನ್‌ಲೈನ್ ತರಗತಿ ಮುಂದುವರಿಸಿವೆ.

ಪುಟ 2A

... ಎಂದು ಪೊಲೀಸರು ತಿಳಿಸಿದ್ದಾರೆ.

**ಆನ್‌ಲೈನ್ ತರಗತಿ ರದ್ದತಿಗೆ ಗಣ್ಯರ ಸ್ವಾಗತ    ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದಾಗಲಿ ಎಂದ ತನ್ವೀರ್**

# 6ನೇ ತರಗತಿಯಿಂದ ಇ-ಕ್ಲಾಸ್‌ಗಿಲ್ಲ ತಡೆ

ವಿ.ವಾ: 12-06-2020

**ಮೊದಲನೇ ಪುಟದಿಂದ...**

ಆನಂತರ 7ನೇ ತರಗತಿಯವರೆಗೂ ಆನ್‌ಲೈನ್ ಶಿಕ್ಷಣ ರದ್ದುಪಡಿಸುವಂತೆ ಶಿಕ್ಷಣ ಸಚಿವರಿಗೆ ಸಲಹೆ ನೀಡಿರುವುದಾಗಿ ತಿಳಿಸಿದರು.

**ಇನ್ನೂ ನಿರ್ಧಾರವಾಗಿಲ್ಲ:** ಸಚಿವ ಮಾಧುಸ್ವಾಮಿ ಹೇಳಿಕೆ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದಂತೆಯೇ ಎಚ್ಚೆತ್ತ ಸಚಿವ ಸುರೇಶ್ ಕುಮಾರ್ 7ನೇ ತರಗತಿವರೆಗೂ ಆನ್‌ಲೈನ್ ಶಿಕ್ಷಣ ರದ್ದುಗೊಳಿಸಬೇಕೆಂಬ ಬಗ್ಗೆ ಸಲಹೆ ಮಾತ್ರ ಬಂದಿದೆ. ಇನ್ನೂ ನಿರ್ಧಾರವಾಗಿಲ್ಲ ಎಂದರು.

ಸಂಪುಟ ಸಭೆ ನಂತರ ಅನೌಪಚಾರಿಕ ಸಭೆ ನಡೆಯುತ್ತಿತ್ತು.

**» ಸಲಹೆ ಬಂದಿದೆ, ಇನ್ನೂ ನಿರ್ಧಾರವಾಗಿಲ್ಲ**

'ಭಾರತರತ್ನ' ಡಾ.ಸಿ.ಎನ್.ಆರ್. ರಾವ್ ನನಗೆ ಕರೆ ಮಾಡಿ ಆನ್‌ಲೈನ್ ಕ್ಲಾಸ್ ರದ್ದು ಮಾಡಿರುವುದು ಸೂಕ್ತವಾಗಿದೆ ತಿಳಿಸಿದರು. ಈ ವಿಷಯವನ್ನು ಎಲ್ಲರ ಮುಂದೆ ಪ್ರಸ್ತಾಪಿಸಿದೆ. ಅಲ್ಲಿದ್ದ ಕೆಲವು ಸಚಿವರು, ಇದೊಂದು ಉತ್ತಮವಾದ ಕೆಲಸ. ಇದನ್ನು 5ನೇ ತರಗತಿ ಬದಲಾಗಿ 7ನೇ ತರಗತಿಯವರೆಗೂ ರದ್ದು ಮಾಡಿದರೆ ಮತ್ತಷ್ಟು ಒಳ್ಳೆಯ ಕೆಲಸವಾಗುತ್ತದೆಂದು ಸಲಹೆ ನೀಡಿದರು. ಆನಂತರ ಮಾಧ್ಯಮಗಳಲ್ಲಿ ಇದೊಂದು ಸಚಿವ ಸಂಪುಟದ ನಿರ್ಧಾರ ಎಂಬಂತೆ ಪ್ರಚಾರ ಪಡೆದುಕೊಂಡಿತೆಂದು ಸಚಿವ ಸುರೇಶ್ ಕುಮಾರ್ ಸ್ಪಷ್ಟಪಡಿಸಿದರು.

**ಎಸ್ಸೆಸ್ಸೆಲ್ಸಿ ಪರೀಕ್ಷೆ ಬೇಡ:** ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ರದ್ದು ಮಾಡುವುದು ಸೂಕ್ತವೆಂದು ಮಾಜಿ ಶಿಕ್ಷಣ ಸಚಿವ ತನ್ವೀರ್ ಸೇಠ್ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ಸಾಮಾಜಿಕ ಅಂತರ ಕಾಯ್ದುಕೊಂಡು, ಮಾಸ್ಕ್ ಧರಿಸಿ ಪರೀಕ್ಷೆ ನಡೆಸುವುದು ಸುಲಭದ ಮಾತಲ್ಲ. ವಲಸೆ ಮಕ್ಕಳು, ರಾಜ್ಯದಗಡಿ ಭಾಗಗಳಲ್ಲಿನ ಶಾಲಾ ವಿದ್ಯಾರ್ಥಿಗಳಿಗೆ ಪರೀಕ್ಷೆ ಆಯೋಜನೆ ಮಾಡುವುದು ಕಷ್ಟ. 8.5 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು ಕಷ್ಟ. ಕಂಟೈನ್ಮೆಂಟ್ ವಲಯದಲ್ಲಿ ಪರೀಕ್ಷೆ ನಡೆಸುವುದು ಕಷ್ಟ ಎಂದು ಸಿಎಂಗೆ ಮನವಿ ಮಾಡಿದ್ದಾರೆ.

**ಎಲ್‌ಕೆಜಿಯಿಂದ 5ನೇ ತರಗತಿವರೆಗೆ ಆನ್‌ಲೈನ್ ಶಿಕ್ಷಣ ರದ್ದು ಮಾಡಿರುವುದು ಸರಿಯಾದ ಕ್ರಮ. ನನ್ನ ಪ್ರಕಾರ ಪಿಯುಸಿವರೆಗೂ ಆನ್‌ಲೈನ್ ತರಗತಿ ಅಗತ್ಯವಿಲ್ಲ. ಶಾಲೆಯಲ್ಲೇ ಮಕ್ಕಳಿಗೆ ಪಾಠ ಮಾಡಬೇಕು. ಕರೊನಾ ಪ್ರಕರಣ ಹೆಚ್ಚುತ್ತಿರುವುದರಿಂದ ಅಕ್ಟೋಬರ್ ವರೆಗೂ ಶಾಲೆ ತೆರೆಯಬಾರದು.**

| **ಸಿದ್ದರಾಮಯ್ಯ** ವಿಧಾನಸಭೆ ಪ್ರತಿಪಕ್ಷ ನಾಯಕ

**ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಲೇಬೇಕು. ಸ್ವಲ್ಪ ತಡವಾದರೂ ಪರವಾಗಿಲ್ಲ. ಪರೀಕ್ಷೆಯೇ ಇಲ್ಲದ ಶಿಕ್ಷಣ ವ್ಯರ್ಥ. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಬೇಕಿದ್ದರೆ ಪರೀಕ್ಷೆ ದಿನಗಳಂದು ಬೆಳಗ್ಗೆ 7ರಿಂದ ಸಂಜೆ 4ರವರೆಗೆ ಲಾಕ್‌ಡೌನ್ ಘೋಷಿಸಿ, ವಿದ್ಯಾರ್ಥಿಗಳು ನಿರಾತಂಕವಾಗಿ ಪರೀಕ್ಷೆ ಎದುರಿಸಲು ಅವಕಾಶ ನೀಡಬಹುದು.**

| **ಕಿಮ್ಮನೆ ರತ್ನಾಕರ** ಮಾಜಿ ಸಚಿವ

## ಮುಂದುವರಿದಿರುವ ಆನ್‌ಲೈನ್ ಕ್ಲಾಸ್!

**ಮೊದಲನೇ ಪುಟದಿಂದ...**

ಈ ಸಂಬಂಧ ನೂರಾರು ಪಾಲಕರು ಖಾಸಗಿ ಶುಲ್ಕ ಹೆಚ್ಚಳದ ದೂರು ಸ್ವೀಕಾರಕ್ಕಾಗಿ ತೆರೆದಿರುವ ಸಹಾಯವಾಣಿಗೆ ಕರೆ ಮಾಡಿ ಆನ್‌ಲೈನ್ ತರಗತಿ ನಡೆಸುತ್ತಿರುವ ಬಗ್ಗೆ ದೂರು ನೀಡಿದ್ದಾರೆ.

**ಪ್ರೀ-ರೆಕಾರ್ಡ್:** ಮತ್ತಷ್ಟು ಶಾಲೆಗಳು ಆನ್‌ಲೈನ್ ತರಗತಿ ಬದಲಾಗಿ ಪೂರ್ವ ನಿಯೋಜಿತವಾಗಿ ಪಾಠಗಳ ಬೋಧನೆಯನ್ನು ವಿಡಿಯೋ ರೆಕಾರ್ಡ್ ಮಾಡಿ ಯು-ಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿ ಆದರ ಲಿಂಕ್ ಅನ್ನು ಪಾಲಕರ ಮೊಬೈಲ್‌ಗೆ ಕಳುಹಿಸುತ್ತಿವೆ.

**ಈ ರೀತಿಯ ಆಡಿಯೋ ಅಥವಾ ವಿಡಿಯೋ ಚಿತ್ರೀಕರಿಸಿದ ಪ್ರೀ- ರೆಕಾರ್ಡ್‌ಗಳನ್ನು 5ನೇ ತರಗತಿಯ ವಿದ್ಯಾರ್ಥಿಗಳಿಗೆ ಕಳುಹಿಸುವಂತಿಲ್ಲ. ಸಮಿತಿ ಈ ಎಲ್ಲ ವಿಚಾರಗಳ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲಿದೆ.**

| **ಎಸ್. ಸುರೇಶ್ ಕುಮಾರ್** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ